

ಮಗನೊಟ್ಟಿಗೆ ಕೂತು ತಮ್ಮ ಭೌಗೋಳಿಕ ಜ್ಞಾನವನ್ನು ಹಂಚಿಕೊಳ್ಳೋಣವೆಂದು ಆಶಿಸಿದ್ದ ಮೂರ್ತಿಗಳಿಗೆ ಮಗ ಪಕ್ಕದಲ್ಲೇ ಖಾಲಿ ಇದ್ದರೂ, ದೂರದ ಸೀಟಿನಲ್ಲಿ ಕುಳಿತದ್ದು ವ್ಯಥೆಯೆನಿಸಿತು. ವಯೋಸಹಜ ಮೂತ್ರ ಸೋರಿಕೆಯಿಂದ ಡೈಪರ್ ಬಳಸುತ್ತಿದ್ದ ಮೂರ್ತಿಗಳ ಹತ್ತಿರ ದುರ್ವಾಸನೆ ಎಂದು ಅಸಹ್ಯಪಟ್ಟುಕೊಂಡ ವೈಷ್ಣವ್, ಮೂರ್ತಿ ಅವರಿಂದ ದೂರವೇ ಕುಳಿತಿದ್ದ. ರಾತ್ರಿ ಮಲಗಿದ್ದಾಗ ಮೂತ್ರ ಸೋರಿಕೆಯಿಂದ ಬಟ್ಟೆ ಒದ್ದೆಯಾದಂತೆನಿಸಿ ಒಳ ಉಡುಪು ಬದಲಿಸಲು ಎದ್ದು ಮಬ್ಬು ಬೆಳಕಿನಲ್ಲಿ ಮೂರ್ತಿ ಸೂಟ್ ಕೇಸ್ ತೆರೆಯಲು ತಡಕುತ್ತಿದ್ದರು. ಸದ್ದಿಗೆ ಎಚ್ಚರಗೊಂಡ ಮಗ 'ಬೇರೆಯವರ ವಸ್ತು ಮುಟ್ಟಬಾರದೆಂಬ ಕಾಮನ್ ಸೆನ್ಸ್ ಇಲ್ವಾ?' ಎಂದು ಗುಡುಗಿದಾಗ ಹನಿಗಣ್ಣಾದ ಮೂರ್ತಿಯವರ ಕಣ್ಣೀರು ವೈಷ್ಣವ್‌ಗೆ ಮೂತ್ರದಂತೇ ಇನ್ನೊಂದು ಅಸಹ್ಯ ಸ್ರಾವವೆನಿಸಿತು. ಅಲಾಸ್ಕಾ ಪ್ರವಾಸದ ಮಹದಾಸೆ ನೆರವೇರಿದರೂ ಅಲ್ಲಿ ಫೋಟೊ ಕ್ಲಿಕ್ಕಿಸಲು ಮೂರ್ತಿಯವರಿಗೆ ಮನಸ್ಸಾಗಲಿಲ್ಲ.

ಅಲಾಸ್ಕಾ ಪ್ರವಾಸ ಮುಗಿಸಿ ಬರುವುದರಲ್ಲಿ ಬರೀ ಬ್ರೆಡ್ ಜಾಮ್ ತಿಂದು ಅನ್ನ ಕಾಣದ ಸುಗುಣ ಬೆಂಗಳೂರಿಗೆ ಹೋಗುವ ಇಂಗಿತ ಮೂರ್ತಿಯವರಲ್ಲಿ ಹೇಳಿದರು. ಅಷ್ಟು ಹೊತ್ತಿಗೆ ಮನೆ ಬಿಟ್ಟು ಹೊರಡಿ ಎಂಬ ಮಾತನ್ನಾಡದೇ ಹೋದರೂ ತಾವು ಅಲ್ಲಿ ಬೇಡದ ವಸ್ತುಗಳು ಎಂದು ಮೂರ್ತಿಗಳಿಗೆ ಅನಿಸಿತ್ತು. ಇನ್ನೆರಡು ವಾರದ ನಂತರ ಬುಕ್ ಆಗಿದ್ದ ಟಿಕೆಟ್ ರದ್ದು ಮಾಡಿ, 'ನಾಳೆಗೇ ರಿಟರ್ನ್ ಬುಕ್ ಮಾಡು' ಎಂದು ತಮ್ಮದೇ ಮತ್ತಷ್ಟು ಡಾಲರ್ ತೆತ್ತು ಹೇಳಿದಾಗ ಮಗ ಅದಕ್ಕಾಗೇ ಕಾದಿದ್ದವನಂತೆ ಬುಕ್ ಮಾಡಿಕೊಟ್ಟ. ಬೆಂಗಳೂರಿಗೆ ಬಂದಿಳಿದಾಗ ಮೂರ್ತಿಗಳಿಗೆ ತಲೆಗೇರಿಸುವ ಚಿನ್ನದ ಗರಿಗಿಂತ ಮಡಿಲು ನೀಡುವ ಮಣ್ಣೇ ಹಿತವೆನಿಸಿತ್ತು.

ದಿನ ಕಳೆದಂತೆ ಮೂರ್ತಿ ಕುಗ್ಗಿಹೋದರು. ವಿಜಯ ದಶಮಿಗೆ ಅಪ್ಪ ಅಮ್ಮನ ಕರೆಯಲು ಬಂದ ವೈಭವ್ ಅಪ್ಪನನ್ನು ನೋಡಿ ಕಂಗಾಲಾದ. ಅಮ್ಮ ಕೂಡಾ ಮನೆ ನಿಭಾಯಿಸಲು ಸಾಧ್ಯ ಆಗದಷ್ಟು ಕುಗ್ಗಿರುವುದನ್ನು ಅರ್ಥ ಮಾಡಿಕೊಂಡು ಕೂಡಲೇ ಇಬ್ಬರೂ ತನ್ನೊಂದಿಗೆ ಹಳ್ಳಿಗೆ ಬರಬೇಕೆಂದು ಬೇಡಿಕೊಂಡ. ಇಲ್ಲಿನ ಮನೆ ಬಾಡಿಗೆ ಕೊಡಲು ವ್ಯವಸ್ಥೆ ಮಾಡುವುದಾಗಿ ಹೇಳಿ, ಹಳ್ಳಿಗೇ ಬಂದಿರಲು ಒತ್ತಾಯಿಸಿದ. ವೈಭವ್‌ನ ಕಣ್ಣಲ್ಲಿ ಜಿನುಗಿದ ಪ್ರೀತಿಯ ಕರೆ ಮೂರ್ತಿಗಳಿಗೆ ಇಲ್ಲ ಎನ್ನಲು ಬಿಡಲಿಲ್ಲ. ಹಳ್ಳಿಗೆ ಬಂದ ಮೂರ್ತಿ ದಂಪತಿಯನ್ನು ಸೊಸೆಯೂ, ಮೊಮ್ಮಕ್ಕಳೂ ಆದರದಿಂದ ಬರಮಾಡಿಕೊಂಡರು. ಮಗ ಸೊಸೆಯ ಪ್ರೀತಿ, ಕಾಳಜಿ ದಂಪತಿಯನ್ನು ಚೇತರಿಸಿಕೊಳ್ಳುವಂತೆ ಮಾಡಿತು.

ಅಂದು ವಿಜಯದಶಮಿ. ಬನ್ನಿ ಎಲೆಗಳನ್ನು ಕೈಯಲ್ಲಿಟ್ಟು 'ಬಾಳು ಬಂಗಾರವಾಗಲಿ ಎಂದು ಆಶೀರ್ವದಿಸಿ' ಎಂದು ಹೇಳುತ್ತಾ ಕಾಲಿಗೆ ಬಿದ್ದ ಮೊಮ್ಮಕ್ಕಳು, ಸೊಸೆಯನ್ನು ನೋಡಿ ಮೂರ್ತಿಗಳು ಗದ್ಗದಿತರಾದರು. ವೈಭವ್ ತಂದೆ ತಾಯಿಯ ಕೈಯಲ್ಲಿ ಬನ್ನಿ ಎಲೆಗಳನ್ನು ಇಟ್ಟು ಕಾಲಿಗೆ ನಮಸ್ಕರಿಸುವಾಗ, ಭುಜ ಹಿಡಿದು ಮೇಲಕ್ಕೆತ್ತಿದ ಮೂರ್ತಿಗಳಿಗೆ ಅವನ ಕೆನ್ನೆ ಮೇಲಿನ ಗಾಯದ ಗುರುತು ತಮ್ಮನ್ನು ನೋಡಿ ನಕ್ಕಂತಾಯಿತು. ●